**ಅ.ದಾವಾ ನಂ. 199/2020** **ಪಿ.ಡಬ್ಲ್ಯು-1**

**ದಿನಾಂಕ 10/07/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಂ.ಇ.ಎಸ್ ವಕೀಲರಿಂದ**

ನನಗೆ ಜಗದೀಶ ಎಂಬ ಮತ್ತೊಂದು ಅಡ್ಡಹೆಸರು ಇದೆ ಎಂದರೆ ಸರಿಯಲ್ಲ. ನನ್ನ ತಂದೆಗೆ ನಾನು ಮತ್ತು ತಂಗಿಯನ್ನು ಹೊರತುಪಡಿಸಿ ಬೇರೆ ಯಾರೂ ಮಕ್ಕಳಿಲ್ಲ ಎಂದರೆ ಸರಿ. ಸಾಕ್ಷಿಗೆ ನಿ.ಪಿ 5 ನ್ನು ತೋರಿಸಿ ಅದರ 2 ನೇ ಖಂಡಿಕೆಯ 4 ನೇ ಸಾಲಿನಲ್ಲಿ ರಮೇಶ ಮತ್ತು ಭಾಗಮ್ಮ ರವರ ಮೈನರ್ ಮಕ್ಕಳು ಜಗದೀಶ ಮತ್ತು ಅರ್ಚನ ಎಂದು ನಮೂದಾಗಿದೆ ಎಂದು ಸೂಚಿಸಲು ಸಾಕ್ಷಿ ಹೌದು ಎಂದು ಒಪ್ಪಿದ ಮೇರೆಗೆ ಸದರಿ ಭಾಗಾಂಶವನ್ನು ನಿ.ಡಿ 1 ಎಂದು ಗುರುತಿಸಲಾಯಿತು. ಸದರಿ ಕ್ರಯಪತ್ರ ನಮ್ಮ ಪರವಾಗಿಯೂ ಬರೆದುಕೊಡಲಾಗಿದೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದ 2 ನೇ ಪುಟದ 2 ನೇ ಖಂಡಿಕೆಯಲ್ಲಿ ದರದ್ದು ನಿಮಿತ್ಯ ಸದರಿ ಕ್ರಯವನ್ನು ಬರೆದುಕೊಡಲಾಗಿದೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ನಾನು ನನ್ನ ತಂದೆ - ತಾಯಿ ಎಲ್ಲರೂ ಇವತ್ತಿಗೂ ಒಟ್ಟು ಕುಟುಂಬದಲ್ಲೇ ವಾಸವಿದ್ದೇವೆ ಎಂದರೆ ಸರಿಯಲ್ಲ. ನನ್ನ ವಾದಪತ್ರದಲ್ಲಿ ನಾನು ನನ್ನ ತಂದೆ ತಾಯಿ ಇವತ್ತಿಗೂ ಅವಿಭಕ್ತ ಕುಟುಂಬದಲ್ಲಿ ವಾಸವಿದ್ದೇವೆ ಎಂದು ಬರೆಸಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ನನ್ನ ತಂದೆ-ತಾಯಿಗೂ ತಿಳುವಳಿಕೆ ಪತ್ರ ಹೋಗಿದೆ ಎಂದರ ಸರಿ. ತಿಳುವಳಿಕೆ ಪತ್ರ ಜಾರಿಯಾಗಿದ್ದರೂ ನನ್ನ ತಂದೆ - ತಾಯಿ ನ್ಯಾಯಾಲಯದ ಮುಂದೆ ಹಾಜರಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ-ತಾಯಿ ಉದ್ದೇಶಪೂರ್ವಕವಾಗಿ 3 ನೇ ಪ್ರತಿವಾದಿಗೆ ತೊಂದರೆ ನೀಡುವ ದುರುದ್ದೇಶದಿಂದ ನಮ್ಮ ಕೈಯಲ್ಲಿ ಸುಳ್ಳು ದಾವೆಯೊಂದನ್ನು ಹಾಕಿಸಿದ್ದಾರೆ ಎಂದರೆ ಸರಿಯಲ್ಲ. ನಿಜವಾಗಿಯೂ ಇದು ಒಟ್ಟು ಕುಟುಂಬದ ಆಸ್ತಿಯೇ ಆಗಿದ್ದರೇ ನಿಮ್ಮ ಕುಟುಂಬದ ಬೇರೆ ಎಲ್ಲಾ ಆಸ್ತಿಗಳನ್ನು ಸೇರಿಸಿ ದಾವೆ ಸಲ್ಲಿಸುತ್ತಿದ್ದು, ಹಾಗೆ ಸಲ್ಲಿಸದೇ ಇರುವ ಕಾರಣ ದಾವಾ ಸ್ವತ್ತು ಒಟ್ಟು

ಕುಟುಂಬದ ಸ್ವತ್ತಲ್ಲ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ಎಲ್ಲಾ ಆಸ್ತಿಗಳನ್ನು ಸೇರಿಸಿಯೇ ಈ ದಾವೆ ಸಲ್ಲಿಸಿದ್ದೇವೆ ಎಂದು. ನಮ್ಮ ಕುಟುಂಬಕ್ಕೆ ಒಟ್ಟು 5 ಸರ್ವೆ ನಂಬರ್ ಗಳಿದ್ದಾರೆ. ವಾಸದ ಮನೆಯೂ ನಮಗೆ ಇರುತ್ತದೆ.

2. 2013 ರ ಕ್ರಯದ ಆಧಾರದ ಮೇರೆಗೆ 3 ನೇ ಪ್ರತಿವಾದಿದಯ ಹೆಸರಿನಲ್ಲಿ ಖಾತೆ ಬದಲಾವಣೆ ಆಗಿದೆ ಎಂದರೆ ಸರಿ. ಸದರಿ ಕ್ರಯಪತ್ರದ ಆಧಾರದ ಮೇರೆಗೆಯೇ 3 ನೇ ಪ್ರತಿವಾದಿ ದಾವಾ ಐಟಂ ನಂ.1 ರಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. 3 ನೇ ಪ್ರತಿವಾದಿಯ ಹೆಸರಿನಲ್ಲಿ ಆಗಿರುವಂತಹ ಖಾತೆಯನ್ನು ಅಕ್ರಮ ಎಂದು ಪ್ರಶ್ನಿಸಿ ಯಾವುದೇ ಕಂದಾಯ ಅಧಿಕಾರಿಗಳ ಮುಂದೆ ನಾನು ಯಾವುದೇ ಮೇಲ್ಮನವಿಯಾಗಲೀ, ಅರ್ಜಿಯಾಗಲೀ ಸಲ್ಲಿಸಿಲ್ಲ. ಈ ಪ್ರಕರಣದಲ್ಲಿ ನನ್ನ ತಂದೆಯನ್ನು ಕರೆಸಿ ವಿಚಾರಣೆ ಮಾಡಲು ನನಗೆ ತೊಂದರೆ ಇಲ್ಲ. ದಾವಾ ಐಟಂ ನಂ,1 04.04.1970 ರಲ್ಲಿ ನನ್ನ ತಂದೆಗೆ ಕ್ರಯದ ಮೂಲಕ ಬಂದಿದ್ದು ಅದು ಆತನ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ಕ್ರಯದ ಮೂಲಕವೇ ಬಂದಿಲ್ಲ ಎಂದು. ಸದರಿ ದಾವಾ ಐಟಂ ನಂ. 1 ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾಗಿರುವ ಕಾರಣ ನನ್ನ ಕುಟುಂಬದವರೆಲ್ಲರೂ ಸೇರಿ 3 ನೇ ಪ್ರತಿವಾದಿಗೆ ಕ್ರಯ ಮಾಡಿದ್ದೇವೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಎಲ್ಲಾ ದಾಖಲಾತಿಗಳನ್ನು ಕ್ರಮಬದ್ಧವಾಗಿ ಪರಿಶೀಲನೆ ಮಾಡಿ ಕಾನೂನಿನಂತೆಯೇ ಸದುದ್ದೇಶದಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಕ್ರಯಪತ್ರದ ಆಧಾರದ ಮೇರೆಗೆ ದಾವಾ ಐಟಂ ನಂ. 1 ಕ್ಕೆ 3 ನೇ ಪ್ರತಿವಾದಿಯೇ ಸಂಪೂರ್ಣ ಹಕ್ಕುದಾರರು, ಮಾಲೀಕರು ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ಮೋಸದಿಂದ ಆಗಿದೆ ಎಂದು. ದಾವಾ ಐಟಂ ನಂ. 1 ರಲ್ಲಿ ನನಗಾಗಲೀ, ನನ್ನ ತಂಗಿಗಾಗಲೀ ಯಾವುದೇ ಹಿಸ್ಸೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಕ್ರಯವಾಗಿರುವ ಬಗ್ಗೆ ನಮಗೆ 15-20

ವರ್ಷಗಳ ಹಿಂದೆಯೇ ಮಾಹಿತಿ ಇದ್ದು ನಾನು, ನನ್ನ ತಂದೆ - ತಾಯಿ ಷರಿಕ್ಕಾಗಿ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇ.**

**ಜೆಎಂಎಫ್‌ಸಿ., ಹೊಳೆನರಸೀಪುರ.**